ದಿನಾಂಕಃ 03.11.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಂದುವರೆದು ಪಾಟಿ ಸವಾಲುಃ 5 ಮತ್ತು 6 ನೇ ಪ್ರತಿವಾದಿಯರ ಪರವಾಗಿ ಶ್ರೀ ಆರ್.ವಿ. ವಕೀಲರಿಂದಃ**

ಈ ದಾವೆ ಸಲ್ಲಿಸುವ ಪೂರ್ವದಲ್ಲಿ ನಮ್ಮ ವಕೀಲರ ಮೂಲಕ ನಾನು ಪ್ರತಿವಾದಿಯರಿಗೆ ನೋಟಿಸ್ ಅನ್ನು ಕಳುಹಿಸಿದ್ದೆ ಎಂದರೆ ಸರಿ. ನಾನು ಕಳುಹಿಸಿದ ನೋಟಿಸ್ ಗೆ 5 ಮತ್ತು 6 ನೇ ಪ್ರತಿವಾದಿಯರು ಮರುಉತ್ತರ ನೀಡಿರುತ್ತಾರೆ ಎಂದರೆ ಸರಿ. 5 ಮತ್ತು 6 ನೇ ಪ್ರತಿವಾದಿಯರು ನೀಡಿದ ನೋಟಿಸ್ ನಲ್ಲಿ ಕುಟುಂಬದ ಆಸ್ತಿಗಳನ್ನು ಯಾವಾಗ ಭಾಗ ಮಾಡಿಕೊಂಡಿರುತ್ತಾರೆ ಮತ್ತು ಯಾರ ಯಾರ ಪಾಲಿಗೆ ಯಾವ ಆಸ್ತಿಗಳು ಬಂದಿದೆ ಎಂದು ಯಾರು ಯಾರು ಆಸ್ತಿಗಳನ್ನು ಈಗಾಗಲೇ ಮಾರಾಟ ಮಾಡಿರುತ್ತಾರೆ ಎಂಬ ಮಾಹಿತಿಯನ್ನು ತಿಳಿಸಿರುತ್ತಾರೆ ಎಂದರೆ ಸರಿ. ನಾನು ದುರುದ್ದೇಶದಿಂದ ಪ್ರತಿವಾದಿಯರಿಗೆ ವಕೀಲರ ಮೂಲಕ ನೀಡಿದ ನೋಟಿಸ್ ಮತ್ತು 5 ಮತ್ತು 6 ನೇ ಪ್ರತಿವಾದಿಯರು ನೀಡಿದ ಮರುಉತ್ತರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ಅಣ್ಣ 1 ನೇ ಪ್ರತಿವಾದಿ ಒಟ್ಟು 16 ಎಕರೆ ಜಮೀನನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಎಲ್ಲರೂ ಒಟ್ಟಾಗಿ ಇದ್ದ ಸಮಯದಲ್ಲಿ ಜಮೀನನ್ನು ಮಾರಾಟ ಮಾಡಿ ನನ್ನ ತಂದೆಯ ಆಸ್ಪತ್ರೆಯ ಖರ್ಚನ್ನು ಭರಿಸಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಅಣ್ಣ ಮೃತ ನಂದೀಶ ಪುಣಜನೂರು ಗ್ರಾಮದ ಸರ್ವೇ ನಂಬರ್ 70 ರಲ್ಲಿ 1 ಎಕರೆ 11 ಗುಂಟೆ ಜಮೀನನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಎಲ್ಲರೂ ಒಟ್ಟಾಗಿ ಇದ್ದ ಸಮಯದಲ್ಲಿ ಜಮೀನನ್ನು ಮಾರಾಟ ಮಾಡಿ ನನ್ನ ತಂದೆಯ ಆಸ್ಪತ್ರೆಯ ಖರ್ಚನ್ನು ಭರಿಸಿರುತ್ತಾರೆ ಎಂದು

ನುಡಿಯುತ್ತಾರೆ. ನನ್ನ ಅಣ್ಣ 8 ನೇ ಪ್ರತಿವಾದಿ ವಿರೂಪಾಕ್ಷಸ್ವಾಮಿಯರು ಸಹ ಹೊನ್ನೇಗೌಡನಹಳ್ಳಿ ಗ್ರಾಮದ ಸರ್ವೇ ನಂಬರ್ 24/1 ರಲ್ಲಿ 2 ಎಕರೆ 31 ಗುಂಟೆ ಮತ್ತು ತಮಿಳುನಾಡಿನ ಇಗ್ಗಲೂರು ಮತ್ತು ಚಿಕ್ಕಲ್ಲೂರು ಗ್ರಾಮಗಳಿಗೆ ಸೇರಿದ ಜಮೀನುಗಳನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಎಲ್ಲರೂ ಒಟ್ಟಾಗಿ ಇದ್ದ ಸಮಯದಲ್ಲಿ ಜಮೀನನ್ನು ಮಾರಾಟ ಮಾಡಿ ನನ್ನ ತಂದೆಯ ಆಸ್ಪತ್ರೆಯ ಖರ್ಚನ್ನು ಭರಿಸಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ತಾಯಿ ಅಮ್ಮಣ್ಣಮ್ಮ ಹೊನ್ನೇಗೌಡನಹಳ್ಳಿ ಗ್ರಾಮದ ಸರ್ವೇ ನಂಬರ್ 26 ರಲ್ಲಿ 4 ಎಕರೆ 23 ಗುಂಟೆ ಜಮೀನನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಎಲ್ಲರೂ ಒಟ್ಟಾಗಿ ಇದ್ದ ಸಮಯದಲ್ಲಿ ಜಮೀನನ್ನು ಮಾರಾಟ ಮಾಡಿ ನನ್ನ ತಂದೆಯ ಆಸ್ಪತ್ರೆಯ ಖರ್ಚನ್ನು ಭರಿಸಿರುತ್ತಾರೆ ಎಂದು ನುಡಿಯುತ್ತಾರೆ. 9 ನೇ ಪ್ರತಿವಾದಿ ಶಿವಕುಮಾರ್ ಮತ್ತು ಮೃತ ನಂದೀಶ್ ರವರು ತಮಿಳುನಾಡಿನ ಗುಮ್ಮಟಾಪುರ ಗ್ರಾಮದಲ್ಲಿದ್ದ ನಿವೇಶನಗಳನ್ನು ಸಹ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಎಲ್ಲರೂ ಒಟ್ಟಾಗಿ ಇದ್ದ ಸಮಯದಲ್ಲಿ ಜಮೀನನ್ನು ಮಾರಾಟ ಮಾಡಿ ನನ್ನ ತಂದೆಯ ಆಸ್ಪತ್ರೆಯ ಖರ್ಚನ್ನು ಭರಿಸಿರುತ್ತಾರೆ ಎಂದು ನುಡಿಯುತ್ತಾರೆ.

ನನ್ನ ತಂದೆ ತಮಿಳುನಾಡಿನ ಗುಮ್ಮಟಾಪುರದಲ್ಲಿ ಖಾಯಂ ಆಗಿ ವಾಸವಾಗಿದ್ದ ಮನೆ ದೊಡ್ಡ ಮನೆ ಎಂದರೆ ಸರಿ. ನನ್ನ ಅಣ್ಣಂದಿರು ಮತ್ತು ತಮ್ಮಂದಿರು ಬೇರೆ ಬೇರೆ ಮನೆಗಳನ್ನು ಕಟ್ಟಿಕೊಂಡು ವಾಸವಾಗಿರುತ್ತಾರೆ ಎಂದರೆ ಸಾಕ್ಷಿಯು ಒಂದೇ ಮನೆಯಲ್ಲಿ ವಾಸ ಮಾಡಲು ಆಗದೇ ಇರುವುದರಿಂದ ಮನೆಗಳನ್ನು ಕಟ್ಟಿಕೊಂಡು ವಾಸವಾಗಿರುತ್ತಾರೆ ಎಂದು ನುಡಿಯುತ್ತಾರೆ. 1973 ರಲ್ಲಿ ನನ್ನ ಅಣ್ಣಂದಿರು ಮತ್ತು ತಮ್ಮಂದಿರು ನಮ್ಮ ತಂದೆ ಬದುಕಿದ್ದಾಗಲೇ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಈಗಲೂ ಜಂಟಿ ಸ್ವಾಧೀನದಲ್ಲಿ ಇದ್ದೇವೆ ಎಂಬುದು ಸುಳ್ಳು ಎಂದರೆ ಸರಿಯಲ್ಲ. 5 ಮತ್ತು 6 ನೇ ಪ್ರತಿವಾದಿಯರಿಗೆ ತೊಂದರೆ ಕೊಡುವ ಸಲುವಾಗಿ ಸದರಿ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. 5 ಮತ್ತು 6 ನೇ ಪ್ರತಿವಾದಿಯರ

ಭಾಗಾಂಶಕ್ಕೆ ಬಂದ ಆಸ್ತಿಗಳನ್ನು ದಾವಾ ಷೆಡ್ಯೂಲ್ ನಲ್ಲಿ ಸೇರಿಸಿರುತ್ತೇನೆ ಎಂದರೆ ಸರಿಯಲ್ಲ. ಉದ್ದೇಶಪೂರ್ವಕವಾಗಿ ಬೇರೆ ಪ್ರತಿವಾದಿಯರ ಭಾಗಾಂಶಕ್ಕೆ ಬಂದ ಆಸ್ತಿಗಳನ್ನು ದಾವಾ ಷೆಡ್ಯೂಲ್ ನಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಾಮರಾಜನಗರ.